# Bangalore Development Authority

T.Chowdaiah Road, Kumara Park (West), Bangalore-560 020.

Fascsimile: 3345799, E-mail: bda@vsnl.com


ಸಂಖ್ಯೆ: ಬೆಂಅಪ್ರಾ/ಆಯುಕ್ತರು/ಖಾ.ನಿ.ತೆರಿಗೆ ಮರುಪರಿಷ್ಕರಣೆ/೨೨೨/2016-17 ದಿನಾಂಕ:೨೮-09-2016

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ಪ್ರಾಧಿಕಾರದ ವ್ಯಾಪ್ತಿಯ ಬಡಾವಣೆಗಳಲ್ಲಿನ ಖಾಲಿ ನಿವೇಶನಗಳಿಗೆ ಆಸ್ತಿ ತೆರಿಗೆಯನ್ನು ಮರು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:

1. ಪ್ರಾಧಿಕಾರದ ಸಭೆ ಠರಾವು ಸಂಖ್ಯೆ 26/16 ದಿನಾಂಕ 02.04.2016.
2. ಈ ಕಚೇರಿಯ ಅಧೀಕೃತ ಜ್ಞಾಪನ ಪತ್ರ ಸಂ ಬೆಂಅಪ್ರಾ/ಆಯುಕ್ತರು/ತೆರಿಗೆ ಪರಿಷ್ಕರಣೆ/137/2016-17 ದಿನಾಂಕ 30-04-2016
3. ಈ ಕಚೇರಿಯ ಅಧೀಕೃತ ಜ್ಞಾಪನ ಪತ್ರ ಸಂ ಬೆಂಅಪ್ರಾ/ಆಯುಕ್ತರು/ತೆರಿಗೆ ಪರಿಷ್ಕರಣೆ/149/2016-17 ದಿನಾಂಕ 30-06-2016
4. ಪ್ರಾಧಿಕಾರದ ಸಭೆ ಠರಾವು ಸಂಖ್ಯೆ 94/16 ದಿನಾಂಕ 31-08-2016

******

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯ ಬಡಾವಣೆಗಳಲ್ಲಿನ ಖಾಲಿ ನಿವೇಶನಗಳಿಗೆ ಸಂಬಂದಿಸಿದಂತೆ ಆಸ್ತಿ ತೆರಿಗೆ ದರಗಳನ್ನು ಪ್ರಾಧಿಕಾರದ ಸಭೆಯ ದಿನಾಂಕ 02-04-2016 ವಿಷಯ ಸಂ 26/16 ರ ಠರಾವಿನಂತೆ ಪರಿಷ್ಕರಿಸಲಾಗಿರುತ್ತದೆ. ಈ ಪರಿಷ್ಕರಣೆ ಮಾಡಿರುವ ದರಗಳಂತೆ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 6 X 9 ಮೀ ನಿಂದ 9 X 12 ಮೀ ಅಳತೆಯ ಖಾಲಿ ನಿವೇಶನಗಳಿಗೆ ಕರ್ನಾಟಕ ಸರ್ಕಾರದ ನೊಂದಣಿ ಮತ್ತು ಮುದ್ರಾಂಕ ಇಲಾಖೆಯವರು ಕಾಲಕಾಲಕ್ಕೆ ನಿಗದಿಪಡಿಸುವ ಮಾರ್ಗಸೂಚಿ ಬೆಲೆಯ 2000ದ 01 ನೇ ಭಾಗವನ್ನು ಮತ್ತು 9 X 12 ಮೀ ಗಿಂತ ಜಾಸ್ತಿ 15 X 24 ಮೀ ವರೆಗಿನ ಖಾಲಿ ನಿವೇಶನಗಳಿಗೆ 1000ದ 01ನೇ ಭಾಗವನ್ನು ಆಸ್ತಿ ತೆರಿಗೆಯನ್ನಾಗಿ ನಿಗಧಿಪಡಿಸಲಾಗಿರುತ್ತದೆ. ಮೇಲ್ಕಂಡ ಠರಾವಿನಂತೆ ಉಲ್ಲೇಖ (2 ) ರ ಅಧಿಕೃತ ಜ್ಞಾಪನ ಪತ್ರ ದಿನಾಂಕ 30-04-2016 ಮತ್ತು ಉಲ್ಲೇಖ (3) ರ ಅಧಿಕೃತ ಜ್ಞಾಪನ ಪತ್ರ ದಿನಾಂಕ 30-06-2016 ರಲ್ಲಿ ಪರಿಷ್ಕರಣೆ ಮಾಡಿರುವ ಖಾಲಿ ನಿವೇಶನಗಳ ಆಸ್ತಿತೆರಿಗೆ ದರಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಯಪಡಿಸಲಾಗಿದ್ದು , ಈ ದರಗಳಂತೆ ಪ್ರಾಧಿಕಾರದ ನಿವೇಶನ ಹಂಚಿಕೆದಾರರಿಗೆ ಪರಿಷ್ಕೃತ ದರದಲ್ಲಿ ಖಾಲಿ ನಿವೇಶನ ಆಸ್ತಿ ತೆರಿಗೆಯನ್ನು ಪಾವತಿಸಲು ನೋಟೀಸ್ /ಚಲನ್ ನೀಡಲಾಗಿರುತ್ತದೆ.

ಚಲನ್ ಸ್ವೀಕರಿಸಿದ ಹಲವಾರು ನಿವೇಶನ ಹಂಚಿಕೆದಾರರುಗಳು ಪ್ರತಿನಿತ್ಯಾ ನೂರಾರು ಸಂಖ್ಯೆಯಲ್ಲಿ ಪ್ರಾಧಿಕಾರದ ಆಯುಕ್ತರು /ಅಧಿಕಾರಗಳನ್ನು ಸಂಪರ್ಕಿಸಿ ಹಾಲಿ ವಿಧಿಸಿರುವ ತೆರಿಗೆಯು ಅತೀ ಹೆಚ್ಚಾಗಿದ್ದು ( 3 ರಿಂದ 16 ಪಟ್ಟು) ಸದರಿ ಆಸ್ತಿ ತೆರಿಗೆಯನ್ನು ಕಡಿಮೆ ಮಾಡುವಂತೆ ಕೋರಿರುವ ಹಿನ್ನಲೆಯಲ್ಲಿ ವಿಷಯವನ್ನು ಪ್ರಾಧಿಕಾರದ ಸಭೆಯ ದಿನಾಂಕ 31-08-2016 ವಿಷಯ ಸಂ 94/16 ರಲ್ಲಿ ಚರ್ಚಿಸಲಾಗಿದ್ದು, ದಿನಾಂಕ 02-04-2016 ರಂದು ನಡೆದ ಪ್ರಾಧಿಕಾರದ ವಿಷಯ ಸಂ 26/16 ರಲ್ಲಿ ವಿಧಿಸಿರುವ ಖಾಲಿ ನಿವೇಶನಗಳ ಆಸ್ತಿ ತೆರಿಗೆಯಲ್ಲಿ ಶೇ 50 ರಷ್ಟು ತೆರಿಗೆಯನ್ನು ಕಡಿಮೆ ಮಾಡಲು ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ.

" ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 6 X 9 ಮೀ ನಿಂದ 9 X 12 ಮೀ ಅಳತೆಯ ಖಾಲಿ ನಿವೇಶನಗಳಿಗೆ ಮಾರ್ಗಸೂಚಿ ಬೆಲೆಯ 4000 ದ 01 ನೇ ಭಾಗವನ್ನು ಮತ್ತು 9 X 12 ಮೀ ಗಿಂತ ಜಾಸ್ತಿ 15 X 24 ಮೀ ವರೆಗಿನ ಖಾಲಿ ನಿವೇಶನಗಳಿಗೆ ಮಾರ್ಗಸೂಚಿ ಬೆಲೆಯ 2000 ದ 01 ನೇ ಭಾಗದಷ್ಟು ಆಸ್ತಿ ತೆರಿಗೆಯನ್ನು ಮರುಪರಿಷ್ಕರಿಸಿ ನಿಗಧಿಪಡಿಸಲು ನಿರ್ಣಯಿಸಲಾಯಿತು. "

೧

ಹಾಗೂ ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ಖಾಲಿ ನಿವೇಶನ ಆಸ್ತಿ ತೆರಿಗೆ ದರಗಳನ್ನು ಮತ್ತು ಮೇಲ್ಕಂಡ ಅಂಶಗಳನ್ನು ಪ್ರಾಧಿಕಾರದ Website ನಲ್ಲಿ ಪ್ರಕಟಿಸಲು ಸಹ ಸೂಚಿಸಿದೆ.

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ರವರಿಗೆ ,
ಸಾರ್ವಜನಿಕ ಸಂಪರ್ಕಾಧಿಕಾರಿಗಳು ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ಪ್ರತಿಯನ್ನು:

1. ಕಾರ್ಯದರ್ಶಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಆರ್ಥಿಕ ಸದಸ್ಯರು / ಮುಖ್ಯಲೆಕ್ಕಾಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ಅಭಿಯಂತರ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ಉಪಕಾರ್ಯದರ್ಶಿ-1, 2, 3 ಮತ್ತು 4 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಕಂದಾಯ ಅಧಿಕಾರಿಗಳು, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ 2016-17 ನೇ ಸಾಲಿಗೆ ಖಾಲಿ ನಿವೇಶನಗಳಿಗೆ ವಿಧಿಸಲಾಗಿರುವ ಆಸ್ತಿ ತೆರಿಗೆ ಮೊತ್ತವನ್ನು ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ದರಗಳಂತೆ ಕಚೇರಿ ದಾಖಲಾತಿಗಳಲ್ಲಿ ಸೂಕ್ತ ತಿದ್ದು ಪಡಿ ಮಾಡಲು ಸೂಚಿಸಿದೆ.
6. ಸಿಸ್ಟಂ ಮ್ಯಾನೇಜರ್, ಇಡಿಪಿ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ನೀಡುತ್ತಾ, 2016-17 ನೇ ಸಾಲಿಗೆ ಖಾಲಿ ನಿವೇಶನಗಳಿಗೆ ವಿಧಿಸಲಾಗಿರುವ ಆಸ್ತಿ ತೆರಿಗೆ ಮೊತ್ತವನ್ನು ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ದರಗಳಂತೆ ಡಿಮ್ಯಾಂಡ್ ಚಲನ್ ಗಳಲ್ಲಿ ಸೂಕ್ತ ತಿದ್ದು ಪಡಿ ಮಾಡಲು ಸೂಚಿಸಿದೆ ಹಾಗೂ ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ಖಾಲಿ ನಿವೇಶನ ಆಸ್ತಿ ತೆರಿಗೆ ದರಗಳನ್ನು ಪ್ರಾಧಿಕಾರದ Website ನಲ್ಲಿ ಪ್ರಕಟಿಸಲು ಸೂಚಿಸಿದೆ.

# Bangalore Development Authority

T.Chowdaiah Road, Kumara Park (West), Bangalore-560 020.
Fascsimile: 3345799, E-mail: bda@vsnl.com

ಸಂಖ್ಯೆ: ಬೆಂಅಪ್ರಾ/ಆಯುಕ್ತರು/ಖಾ.ನಿ.ತೆರಿಗೆ ಮರುಪರಿಷ್ಕರಣೆ/319/2016-17 ದಿನಾಂಕ ೨೮-09-2016

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ಪ್ರಾಧಿಕಾರದ ವ್ಯಾಪ್ತಿಯ ಬಡಾವಣೆಗಳಲ್ಲಿನ ಖಾಲಿ ನಿವೇಶನಗಳಿಗೆ ಆಸ್ತಿ ತೆರಿಗೆಯನ್ನು ಮರು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:
1) ಪ್ರಾಧಿಕಾರದ ಸಭೆ ಠರಾವು ಸಂಖ್ಯೆ 26/16 ದಿನಾಂಕ 02.04.2016.
2) ಈ ಕಚೇರಿಯ ಅಧೀಕೃತ ಜ್ಞಾಪನ ಪತ್ರ ಸಂ ಬೆಂಅಪ್ರಾ/ಆಯುಕ್ತರು/ತೆರಿಗೆ ಪರಿಷ್ಕರಣೆ/137/2016-17 ದಿನಾಂಕ 30-04-2016
3) ಈ ಕಚೇರಿಯ ಅಧೀಕೃತ ಜ್ಞಾಪನ ಪತ್ರ ಸಂ ಬೆಂಅಪ್ರಾ/ಆಯುಕ್ತರು/ತೆರಿಗೆ ಪರಿಷ್ಕರಣೆ/149/2016-17 ದಿನಾಂಕ 30-06-2016
4) ಪ್ರಾಧಿಕಾರದ ಸಭೆ ಠರಾವು ಸಂಖ್ಯೆ 94/16 ದಿನಾಂಕ 31-08-2016

******

ದಿನಾಂಕ 31-08-2016 ರಂದು ನಡೆದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ 6 X 9 ಮೀ ನಿಂದ 9 X 12 ಮೀ ಅಳತೆಯ ಖಾಲಿ ನಿವೇಶನಗಳಿಗೆ ಮಾರ್ಗಸೂಚಿ ಬೆಲೆಯ 4000 ದ 01 ನೇ ಭಾಗವನ್ನು ಮತ್ತು 9 X 12 ಮೀ ಗಿಂತ ಜಾಸ್ತಿ 15 X 24 ಮೀ ವರೆಗಿನ ಖಾಲಿ ನಿವೇಶನಗಳಿಗೆ ಮಾರ್ಗಸೂಚಿ ಬೆಲೆಯ 2000 ದ 01 ನೇ ಭಾಗದಷ್ಟು ಆಸ್ತಿ ತೆರಿಗೆಯನ್ನು ಮರುಪರಿಷ್ಕರಿಸಿ ನಿಗಧಿಪಡಿಸಲು ನಿರ್ಣಯಿಸಲಾಗಿರುತ್ತದೆ.

ಆದ್ದರಿಂದ :

1) 2016-17 ನೇ ಸಾಲಿನ ಖಾಲಿ ನಿವೇಶನಗಳ ಆಸ್ತಿ ತೆರಿಗೆಯನ್ನು ನಿವೇಶನ ಹಂಚಿಕೆದಾರರು ಈಗಾಗಲೇ ಪಾವತಿ ಮಾಡದಿದ್ದಲ್ಲಿ , ಪ್ರಾಧಿಕಾರದಿಂದ ಖಾಲಿ ನಿವೇಶನ ಆಸ್ತಿ ತೆರಿಗೆ ಪಾವತಿಗೆ ನೀಡಿರುವ ಚಲನ್ ನಲ್ಲಿನ ಮೊತ್ತದ ಶೇ 50 ರಷ್ಟನ್ನು ಮಾತ್ರ ಪ್ರಾಧಿಕಾರದಿಂದ ನೇಮಿಸಲ್ಪಟ್ಟ ಬ್ಯಾಂಕ್ ಗಳಲ್ಲಿ ಪಾವತಿ ಮಾಡಲು ಸೂಚಿಸುವಂತೆ

2) ಪ್ರಾಧಿಕಾರದ ಸಭೆಯ ದಿನಾಂಕ 02-04-2016 ರ ಠರಾವು ಸಂ 26/16 ರಲ್ಲಿ ತೀರ್ಮಾನಿಸಿರುವಂತೆ 2016-17 ನೇ ಸಾಲಿಗೆ ಖಾಲಿ ನಿವೇಶನ ಆಸ್ತಿ ತೆರಿಗೆಯನ್ನು ಈಗಾಗಲೇ ಹಂಚಿಕೆದಾರರು ಪಾವತಿ ಮಾಡಿರುವ ಪ್ರಕರಣಗಳಲ್ಲಿ ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ದರಗಳಿಂದ ಹೆಚ್ಚುವರಿಯಾಗಿ ಪಾವತಿ ಮಾಡಿದ ಖಾಲಿ ನಿವೇಶನ ಆಸ್ತಿ ತೆರಿಗೆಯ ಮೊತ್ತವನ್ನು 2017-18 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಎಂಬುದಾಗಿ

**ಪತ್ರಿಕಾ ಪ್ರಕಟಣೆಯನ್ನು** ನೀಡಲು ಸೂಚಿಸಿದೆ.

ಆದ್ದರಿಂದ 2016-17 ನೇ ಸಾಲಿನ ಖಾಲಿ ನಿವೇಶನಗಳ ಆಸ್ತಿ ತೆರಿಗೆಯನ್ನು ಪ್ರಾಧಿಕಾರದ ಸಭೆಯ ದಿನಾಂಕ 31-08-2016 ವಿಷಯ ಸಂ 94/16 ರಲ್ಲಿ ನಿರ್ಣಯಿಸಿರುವಂತೆ ಮುಂದಿನ ಆದೇಶದವರೆಗೆ ವಿಧಿಸಿ ಪಾವತಿಸಿಕೊಳ್ಳಲು ಈ ಮೂಲಕ ಆದೇಶಿಸಿದೆ.

ಪ್ರಾಧಿಕಾರದ ಸಭೆಯ ದಿನಾಂಕ 02-04-2016 ರ ಠರಾವು ಸಂ 26/16 ರಲ್ಲಿ ತೀರ್ಮಾನಿಸಿರುವಂತೆ ಪ್ರಾಧಿಕಾರದ ವ್ಯಾಪ್ತಿಯ ವಾಣಿಜ್ಯ ಸಂಕೀರ್ಣಗಳಲ್ಲಿನ ಮಳಿಗೆಗಳ ಲೈಸೆನ್ಸ್ ಫೀ, ಖಾಲಿ ನಿವೇಶನ ದಂಡ ಮತ್ತು ಖಾತಾ ವರ್ಗಾವಣೆ ಶುಲ್ಕದ ದರಗಳು ಅಧಿಕೃತ ಜ್ಞಾಪನ ಪತ್ರ ದಿನಾಂಕ 30-04-2016 ರಲ್ಲಿ ಸೂಚಿಸಿರುವಂತೆ ಜಾರಿಯಲ್ಲಿರುತ್ತದೆ. ಮುಂದುವರೆದು ಕಟ್ಟಡಗಳ ಆಸ್ತಿ ತೆರಿಗೆಯ ದರಗಳು ಅಧಿಕೃತ ಜ್ಞಾಪನ ಪತ್ರ ದಿನಾಂಕ 30-06-2016 ರಲ್ಲಿ ಸೂಚಿಸಿರುವಂತೆ ಜಾರಿಯಲ್ಲಿರುತ್ತದೆ.

ಪ್ರಾಧಿಕಾರದ ಸಭೆಯ ದಿನಾಂಕ 02-04-2016 ರ ಠರಾವು ಸಂ 26/16 ರಲ್ಲಿ ತೀರ್ಮಾನಿಸಿರುವಂತೆ 2016-17 ನೇ ಸಾಲಿಗೆ ಖಾಲಿ ನಿವೇಶನ ಆಸ್ತಿ ತೆರಿಗೆಯನ್ನು ಈಗಾಗಲೇ ಹಂಚಿಕೆದಾರರು ಪಾವತಿ ಮಾಡಿರುವ ಪ್ರಕರಣಗಳಲ್ಲಿ ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ದರಗಳಿಂದ ಹೆಚ್ಚುವರಿಯಾಗಿ ಪಾವತಿ ಮಾಡಿದ ಖಾಲಿ ನಿವೇಶನ ಆಸ್ತಿ ತೆರಿಗೆಯ ಮೊತ್ತವನ್ನು 2017-18 ನೇ ಸಾಲಿನ ಖಾಲಿ ನಿವೇಶನ ಆಸ್ತಿ ತೆರಿಗೆಗೆ ಹೊಂದಾಣಿಕೆ ಮಾಡಿಕೊಳ್ಳಲು ಆದೇಶಿಸಿದೆ.

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಪ್ರತಿಯನ್ನು:

1. ಕಾರ್ಯದರ್ಶಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
2. ಆರ್ಥಿಕ ಸದಸ್ಯರು / ಮುಖ್ಯಲೆಕ್ಕಾಧಿಕಾರಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ಅಭಿಯಂತರ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ಉಪಕಾರ್ಯದರ್ಶಿ-1, 2, 3 ಮತ್ತು 4 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಕಂದಾಯ ಅಧಿಕಾರಿಗಳು, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ 2016-17 ನೇ ಸಾಲಿಗೆ ಖಾಲಿ ನಿವೇಶನಗಳಿಗೆ ವಿಧಿಸಲಾಗಿರುವ ಆಸ್ತಿ ತೆರಿಗೆ ಮೊತ್ತವನ್ನು ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ದರಗಳಂತೆ ಕಚೇರಿ ದಾಖಲಾತಿಗಳಲ್ಲಿ ಸೂಕ್ತ ತಿದ್ದು ಪಡಿ ಮಾಡಲು ಸೂಚಿಸಿದೆ.
6. ಸಿಸ್ಟಂ ಮ್ಯಾನೇಜರ್, ಇಡಿಪಿ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ 2016-17 ನೇ ಸಾಲಿಗೆ ಖಾಲಿ ನಿವೇಶನಗಳಿಗೆ ವಿಧಿಸಲಾಗಿರುವ ಆಸ್ತಿ ತೆರಿಗೆ ಮೊತ್ತವನ್ನು ಪ್ರಾಧಿಕಾರದ ಸಭೆಯ ದಿನಾಂಕ 31-08-2016 ರ ಠರಾವು ಸಂ 94/16 ರಲ್ಲಿ ಮರು ಪರಿಷ್ಕರಣೆ ಮಾಡಿರುವ ದರಗಳಂತೆ ಡಿಮ್ಯಾಂಡ್ ಚಲನ್ ಗಳಲ್ಲಿ ಸೂಕ್ತ ತಿದ್ದು ಪಡಿ ಮಾಡಲು ಸೂಚಿಸಿದೆ.
7. ಸಾರ್ವಜನಿಕ ಸಂಪರ್ಕಾಧಿಕಾರಿಗಳು , ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ.